

بِسۡمِ اللّٰہِ الرَّحۡمٰنِ الرَّحِیۡمِ

# ಯೌಮೆ ಮಸೀಹ್ ಮೌಊದ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 23–03–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ಮಾರ್ಚ್ ದಿನಾಂಕ 23 ಆಗಿದೆ. ಈ ದಿನವನ್ನು ಅಹ್ಮದಿಯಾ ಜಮಾಅತ್ ಯೌಮೆ ಮಸೀಹ್ ಮೌಊದ್ ಎಂದು ನೆನಪಿಸುತ್ತದೆ. ಈ ದಿನಕ್ಕೆ ಸಂಬಂಧಿಸಿ ಯೌಮೆ ಮಸೀಹ್ ಮೌಊದ್ ಸಭೆಗಳನ್ನು ಜಮಾಅತ್‌ಗಳಲ್ಲಿ ನಡೆಸಲಾಗುತ್ತಿದೆ. ಈ ದಿನ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಹೇಳಿಕೆಗಳನ್ನು ನಿಮ್ಮ ಮುಂದೆ ಇರಿಸುವೆನು. ಅವುಗಳಲ್ಲಿ ಮಸೀಹ್ ಮೌಊದರ ಆಗಮನದ ಉದ್ದೇಶಲಕ್ಷ್ಯಗಳು, ಅವರ ಆಗಮನದ ಆವಶ್ಯಕತೆ ಮತ್ತು ಅವರ ಸ್ಥಾನದ ಬಗ್ಗೆ ವಿವರಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ವಾದವನ್ನು ಪ್ರಕಟಿಸಿದ ನಂತರ ಮುಸ್ಲಿಮ್ ನಾಮಧೇಯರಾದ ಮತಪಂಡಿತರು ಮುಸ್ಲಿಮ್ ಜನಸಾಮಾನ್ಯರನ್ನು ಅವರ ವಿರುದ್ಧ ಉದ್ರೇಕಿಸಲು ತಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ಪ್ರಯತ್ನಿಸಿದರು. ಆದರೆ ಅಲ್ಲಾಹನ ಸಹಾಯದಿಂದ ಅವರ ಜಮಾಅತ್ ಅಭಿವೃದ್ಧಿ ಗಳಿಸುತ್ತಾ ಇದೆ. ಸಾತ್ವಿಕರಾದ ಜನರು ಈ ಜಮಾಅತಿಗೆ ಸೇರುತ್ತಾ ಇದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಾನೇ ಅಲ್ಲಾಹನ ವಾಗ್ದಾನಗಳ ಪ್ರಕಾರ ಆಗಮಿಸಿದ ಮಸೀಹ್ ಮೌಊದ್ ಎಂದು ವಾದಿಸಿ ತನ್ನ ಆಗಮನದ ಉದ್ದೇಶದ ಕುರಿತು ಹೀಗೆ ಹೇಳಿದರು: ವಾಸ್ತವಿಕ ತೌಹೀದ್ (ಏಕದೇವ ವಿಶ್ವಾಸ), ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಾವಿತ್ರ್ಯ, ಗೌರವ, ಸತ್ಯಸಂಧತೆ, ಪವಿತ್ರ ಖುರ್‌ಆನ್‌ನ ದಿವ್ಯತ್ವ ಎಂಬ ವಿಷಯಗಳ ಬಗ್ಗೆ ದೌರ್ಜನ್ಯಭರಿತ ರೀತಿಯಲ್ಲಿ ತೀವ್ರವಾಗಿ ಆಕ್ರಮಣ ನಡೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಶಿಲುಬೆಯನ್ನು ಮುರಿದು ಹಾಕುವ ಓರ್ವನನ್ನು ಇಳಿಸಲು ಅಲ್ಲಾಹನ ಅಭಿಮಾನ ಆವಶ್ಯಪಡುವುದಿಲ್ಲವೇ? ಏನು ಅಲ್ಲಾಹನು ತನ್ನ ವಾಗ್ದಾನವಾದ: **ಇನ್ನಾ ನಹ್‌ನು ನಝ್ಝಲ್‌ನ ಝ್ಝಿಕ್‌ರ ವ ಇನ್ನಾ ಲಹೂ ಲ ಹಾಫಿಝೂನ್.** (ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದ್ದು. ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು.) ಎಂಬ ವಾಗ್ದಾನವನ್ನು ಮರೆತು ಬಿಟ್ಟಿರುವನೇ? ನೀವು ದೃಢವಾಗಿ ನಂಬಿರಿ, ಅಲ್ಲಾಹನ ವಾಗ್ದಾನಗಳು ಸತ್ಯವಾದವುಗಳಾಗಿವೆ. ಅಲ್ಲಾಹನು ತನ್ನ ವಾಗ್ದಾನಗಳ ಪ್ರಕಾರ ಮುನ್ನೆಚ್ಚರಿಕೆ ನೀಡುವ ಒಬ್ಬನನ್ನು ಲೋಕಕ್ಕೆ ಕಳುಹಿಸಿದನು. ಲೋಕವು ಅವನನ್ನು ಅಂಗೀಕರಿಸಲಿಲ್ಲ. ಆದರೆ ಅಲ್ಲಾಹನು ಅವನನ್ನು ಖಂಡಿತವಾಗಿಯೂ ಅಂಗೀಕರಿಸುವನು. ಬಹಳ ತೀವ್ರವಾಗಿರುವ ಆಕ್ರಮಣಗಳ ಮೂಲಕ ನಿಯೋಜಿತ ಮುನ್ನೆಚ್ಚರಿಕೆಗಾರನ ಸತ್ಯ ಸಂಧತೆಯನ್ನು ಪ್ರಕಟಿಸುವನು. ನಾನು ಸತ್ಯವಾಗಿ ಹೇಳುತ್ತೇನೆ, ಅಲ್ಲಾಹನು ಮಾಡಿದ ವಾಗ್ದಾನಗಳ ಪ್ರಕಾರ ನಾನು ಮಸೀಹ್ ಮೌಊದ್ ಆಗಿ ನಿಯೋಜಿಸಲ್ಪಟ್ಟು ಆಗಮಿಸಿರುವೆನು. ನೀವು ಇಚ್ಛಿಸುವುದಾದರೆ ನನ್ನನ್ನು ಸ್ವೀಕರಿಸಿರಿ. ಅಥವಾ ತಿರಸ್ಕರಿಸಿರಿ. ಆದರೆ ನೀವು ನನ್ನನ್ನು ತಿರಸ್ಕರಿಸುವುದರಿಂದ ಏನೂ ಹಾನಿ ಸಂಭವಿಸಲಾರದು. ಅಲ್ಲಾಹನು ಯಾವುದರ ಬಗ್ಗೆ ಅದು ಆಗುವುದು ಎಂದು ನಿರ್ಧರಿಸಿರುವನೋ ಅದು ಆಗಿಯೇ ತೀರುವುದು. ಏಕೆಂದರೆ ಅಲ್ಲಾಹನು ಆರಂಭದಲ್ಲಿಯೇ ಬರಾಹೀನೆ ಅಹ್ಮದಿಯಾದಲ್ಲಿ ಹೀಗೆ ಹೇಳಿರುವನು: **ಸದಖಲ್ಲಾಹು ವ ರಸೂಲುಹೂ ವ ಕಾನ ವಅದನ್ ಮಫ್‌ಊಲಾ.** ಎಂದರೆ, ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಮಾತು ಸತ್ಯವೆಂದು ತಿಳಿಯಿತು. ಅಲ್ಲಾಹನ ವಾಗ್ದಾನ ಈಡೇರಿತು.

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳಿದರು: ಮಿನ್‌ಹಾಜ್ ನುಬುವ್ವತ್ (ನುಬುವ್ವತ್ ಮಾರ್ಗ) ಪ್ರಕಾರ ಈ ಜಮಾಅತನ್ನು ಪರೀಕ್ಷಿಸಿ ನೋಡಿರಿ. ಸತ್ಯ ಯಾರ ಜೊತೆ ಇದೆ ಎಂದು ನೋಡಿರಿ. ಊಹಾತ್ಮಕ ತತ್ವಗಳಿಂದ ಮತ್ತು ಸೂಚನೆಗಳಿಂದ ಯಾವ ಪ್ರಯೋಜನವೂ ಇಲ್ಲ. ನಾನು ನನ್ನ ಸತ್ಯತೆ ಬಗ್ಗೆ ಊಹಿಸಿ ಮಾತನಾಡುವುದಿಲ್ಲ. ನಾನು ನನ್ನ ವಾದವನ್ನು ಮಿನ್‌ಹಾಜ್ ನುಬುವ್ವತ್ (ನುಬುವ್ವತ್ ಮಾರ್ಗ ಪ್ರಕಾರ)ದ ಒರೆಗಲ್ಲಿನಲ್ಲಿ ಪರೀಕ್ಷಿಸಲು ನಿಮ್ಮ ಮುಂದಿರಿಸುತ್ತಿದ್ದೇನೆ. ಆದುದರಿಂದ ಈ ಒರೆಗಲ್ಲಿನ ಪ್ರಕಾರ ಈ ವಾದದ ಸತ್ಯತೆಯನ್ನು ಪರೀಕ್ಷಿಸದಿರಲು ಕಾರಣ ಏನಿದೆ? ಯಾರು ನಿಷ್ಕಳಂಕ ಹೃದಯರಾಗಿ ನನ್ನ ಮಾತುಗಳನ್ನು ಆಲಿಸುವರೋ ಅವರು ಪ್ರಯೋಜನ ಪಡೆಯುವರು ಎಂದು ನಾನು ದೃಢವಾಗಿ ನಂಬುತ್ತೇನೆ. ಅಂತಹ ಜನರು ನನ್ನ ವಾದವನ್ನು ಅಂಗೀಕರಿಸುವರು. ಆದರೆ ಹೃದಯದಲ್ಲಿ ಜಿಪುಣತೆ ಮತ್ತು ದ್ವೇಷವನ್ನು ಯಾರು ಹೊಂದಿರುವರೋ ಅವರಿಗೆ ನನ್ನ ಮಾತುಗಳು ಯಾವ ಪ್ರಯೋಜನವನ್ನೂ ನೀಡಲಾರವು.

ಪ್ರತಿಯೊಬ್ಬ ಸತ್ಯಾನ್ವೇಷಿಗೆ ನಮ್ಮಿಂದ ನಮ್ಮ ವಾದದ ಸತ್ಯತೆ ಬಗ್ಗೆ ಸಾಕ್ಷ್ಯಾಧಾರಗಳನ್ನು ಆವಶ್ಯಪಡುವ ಹಕ್ಕಿದೆ. ಅಂತಹ ವ್ಯಕ್ತಿಗೆ ನಾವು ನೀಡುವ ಸಾಕ್ಷ್ಯಾಧಾರಗಳು ಪ್ರವಾದಿಗಳು ಜನರ ಮುಂದೆ ಇರಿಸುತ್ತಿದ್ದ ಸಾಕ್ಷ್ಯಾಧಾರಗಳೇ ಆಗಿವೆ. ಪವಿತ್ರ ಖುರ್‌ಆನಿನ ವಚನಗಳು, ಹದೀಸುಗಳು ಮತ್ತು ಇಂದಿನ ಕಾಲ ಒಬ್ಬ ಸುಧಾರಕನ ಆಗಮನವನ್ನು ಆವಶ್ಯಪಡುತ್ತಿದೆ ಎನ್ನುವುದರ ಬಗ್ಗೆ ವೈಚಾರಿಕ ಸಾಕ್ಷ್ಯಾಧಾರಗಳು ನೀಡಲಾಗುವುವು. ನನ್ನ ಮೂಲಕ ಪ್ರಕಟವಾದ ದೃಷ್ಟಾಂತಗಳ ಒಂದು ಪಟ್ಟಿಯನ್ನು ನಾನು ರಚಿಸಿದ್ದೇನೆ. ಅದರಲ್ಲಿ ಅಂದಾಜು ನೂರೈವತ್ತು ದೃಷ್ಟಾಂತಗಳಿವೆ. ಅವುಗಳಿಗೆ ಕೋಟಿಗಟ್ಟಲೆ ಜನರು ಸಾಕ್ಷಿಗಳಾಗಿದ್ದಾರೆ. ನಿಷ್ಪ್ರಯೋಜಕ ವಿಷಯಗಳನ್ನು

ಮುಂದಿರಿಸುವುದು ಸಾತ್ವಿಕರ ಕೆಲಸವಲ್ಲ. ಇದೇ ಕಾರಣದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬರಲಿರುವ ಮಸೀಹ್ ಮೌಊದ್‌ರನ್ನು **ಹಕಮ್** ಆಗಿ ಆಗಮಿಸುವರೆಂದು ಹೇಳಿರುವುದು. ಯಾರ ಹೃದಯದಲ್ಲಿ ಉದ್ಧಟತನವಿದೆಯೋ ಅವರು ನಂಬಲು ಸಿದ್ಧರಾಗುವುದಿಲ್ಲ. ಆದುದರಿಂದ ಅವರು ತಪ್ಪಾದ ಪುರಾವೆಗಳನ್ನೂ ಆಕ್ಷೇಪಗಳನ್ನೂ ಮುಂದಿರಿಸುತ್ತಾರೆ. ಆದರೆ ಅವರು ನೆನಪಿನಲ್ಲಿ ಇಟ್ಟುಕೊಳ್ಳಲಿ, ಕೊನೆಗೆ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ತೀವ್ರವಾದ ಆಕ್ರಮಣಗಳನ್ನು ಮಾಡುವ ಮೂಲಕ ನನ್ನ ಸತ್ಯತೆಯನ್ನು ಪ್ರಕಟಿಸುವನು. ನಾನು ದೃಢವಾಗಿ ನಂಬುತ್ತೇನೆ, ನಾನು ಸುಳ್ಳು ಸೃಷ್ಟಿಸಿ ಹೇಳುತ್ತಿರುವುದಾದರೆ ಅಲ್ಲಾಹನು ನನ್ನನ್ನು ತಕ್ಷಣ ನಾಶ ಮಾಡುತ್ತಿದ್ದನು. ಆದರೆ ನನ್ನ ಈ ಎಲ್ಲಾ ಕಾರ್ಯಭಾರಗಳು ಅಲ್ಲಾಹನ ಕಾರ್ಯಭಾರಗಳೇ ಆಗಿವೆ. ನಾನು ಅವನ ಕಡೆಯಿಂದ ಆಗಮಿಸಿದವನೇ ಆಗಿದ್ದೇನೆ. ನನ್ನನ್ನು ಸುಳ್ಳುಗಾರನೆಂದು ಹೇಳುವುದು ಅಲ್ಲಾಹನನ್ನು ಸುಳ್ಳುಗಾರನೆಂದು ಹೇಳಿದ ಹಾಗಾಗಿದೆ. ಆದುದರಿಂದ ಅಲ್ಲಾಹನು ಸ್ವತಃ ನನ್ನ ಸತ್ಯಸಂಧತೆಯನ್ನು ಪ್ರಕಟಿಸುವನು.

ಮಸೀಹ್ ಮೌಊದರನ್ನು ತಿರಸ್ಕರಿಸುವುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ತಿರಸ್ಕರಿಸಿದಂತಾಗುತ್ತದೆ ಎಂಬುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಸೀಹ್ ಮೌಊದರನ್ನು ತಿರಸ್ಕರಿಸುವುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ತಿರಸ್ಕರಿಸಿದಂತೆ ಆಗುವುದು ಹೇಗೆ? ಅದು ಹೇಗೆಂದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಭವಿಷ್ಯ ನುಡಿದಿದ್ದರು: ಪ್ರತಿಯೊಂದು ಶತಮಾನದ ಆರಂಭದಲ್ಲಿ ಒಬ್ಬ ಮುಜದ್ದಿದ್ ಆಗಮಿಸುವರೆಂದು. ಈ ವಾಗ್ದಾನ (ಮಆಝುಲ್ಲಾಹ್) ಸುಳ್ಳು ಆಗುತ್ತದೆ. ಮತ್ತೆ ಅವರು ಹೇಳಿದ್ದರು: **ಇಮಾಮುಕುಮ್ ಮಿನ್‌ಕುಮ್** (ನಿಮ್ಮ ಪೈಕಿ ನಿಮ್ಮ ಇಮಾಮ್) ಇದು ಸಹ (ಮಆಝುಲ್ಲಾಹ್) ಸುಳ್ಳು ಆಗುವುದು. ಅದೇ ರೀತಿ ಶಿಲುಬೆಯ ಪ್ರಭುತ್ವದ ಕಾಲದಲ್ಲಿ ಒಬ್ಬ ಮಸೀಹ್ ಮತ್ತು ಮಹ್‌ದೀ ಆಗಮಿಸುವ ಶುಭವಾರ್ತೆ ನೀಡಿದ್ದರು. ಅದು ಸಹ (ಮಆಝುಲ್ಲಾಹ್) ಸುಳ್ಳಾಗುವುದು. ಏಕೆಂದರೆ ಶಿಲುಬೆಯ ಪ್ರಬಲತೆ ತಲೆದೋರಿದ್ದರೂ ಆಗಮಿಸಬೇಕಾದ ಇಮಾಮ್ ಆಗಮಿಸಿಲ್ಲ ಎಂದಾಗುತ್ತದೆ. ಯಾರು ಈ ರೀತಿ ಹೇಳುತ್ತಾನೋ ಅವನು ಕೃತ್ಯರೂಪದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸುಳ್ಳುಗಾರನೆಂದು ಆಕ್ಷೇಪಿಸಿದವನಾಗುವುದಿಲ್ಲವೇ?

ನಾನು ಪವಿತ್ರ ಖುರ್‌ಆನನ್ನು ಸತ್ಯವೆಂದು ಅಂಗೀಕರಿಸುವವನೂ ಅದರ ಭವಿಷ್ಯವಾಣಿಗಳನ್ನು ಸತ್ಯಪಡಿಸುವವನೂ ಆಗಿರುವೆನು. ನಾನು ಪಥಭ್ರಷ್ಟನಲ್ಲ. ನಾನು ಮಾರ್ಗದರ್ಶಕ (ಮಹ್‌ದಿ) ಆಗಿರುವೆನು. ನಾನು ಕಾಫಿರ್ ಅಲ್ಲ. ನಾನು ಅವ್ವಲುಲ್ ಮೂಮಿನೀನ್ (ಸತ್ಯವಿಶ್ವಾಸಿಗಳಲ್ಲಿ ಪ್ರಥಮ) ಎಂಬ ಅಭಿದಾನಕ್ಕೆ ಸರಿಯಾಗಿ ಅರ್ಹನಾದವನಾಗಿರುವೆನು. ನಾನು ಹೇಳುವುದು ಸತ್ಯವೆಂದು ಅಲ್ಲಾಹನು ನನಗೆ ತಿಳಿಸಿರುವನು. ಅಲ್ಲಾಹನ ಮೇಲೆ ದೃಢ ವಿಶ್ವಾಸ ಹೊಂದಿರುವವನಿಗೆ, ಪವಿತ್ರ ಖುರ್‌ಆನ್ ಮತ್ತು ಅಲ್ಲಾಹನ ಸಂದೇಶವಾಹಕರನ್ನು ಸತ್ಯವೆಂದು ಅಂಗೀಕರಿಸುವವನಿಗೆ ಇಷ್ಟು ಸಾಕ್ಷ್ಯಾಧಾರ ಸಾಕು. ಅವನು ನನ್ನ ಬಾಯಿಯಿಂದ ಆಲಿಸಿ ಮೌನವಾಗಿರಬೇಕು. ಆದರೆ ನಿರ್ಭಯವಾಗಿ ವರ್ತಿಸುವವನಿಗೆ ಚಿಕಿತ್ಸೆ ಏನು? ಅಲ್ಲಾಹನು ಸ್ವತಃ ಅವನಿಗೆ ಮನವರಿಕೆ ಮಾಡಿಕೊಡುವನು. ಜಿಪುಣತೆ ಮತ್ತು ಹಟಮಾರಿತನವಿಲ್ಲದ ಜನರು ನನ್ನ ಮಾತುಗಳನ್ನು ಆಲಿಸಿ ನನ್ನನ್ನು ಹಿಂಬಾಲಿಸಲಿ. ಅನಂತರ ಅವರು ನೋಡಲಿ ಅಲ್ಲಾಹನು ಅವರನ್ನು ಅಂಧಕಾರದಲ್ಲಿರಿಸುತ್ತಾನೋ ಅಥವಾ ಪ್ರಕಾಶದ ಕಡೆಗೆ ಕರೆದೊಯ್ಯುತ್ತಾನೋ ಎಂದು. ನಾನು ದೃಢವಾಗಿ ನಂಬುತ್ತೇನೆ, ಯಾರು ಸಹನೆಯಿಂದಲೂ ಸತ್ಯ ಹೃದಯಿಯಾಗಿಯೂ ನನ್ನನ್ನು ಹಿಂಬಾಲಿಸುತ್ತಾನೋ ಅವನು ನಾಶಗೊಳಿಸಲ್ಪಡಲಾರನು. ಅವನಿಗೆ ಅನಶ್ವರ ಜೀವಿತ ಲಭಿಸುವುದು.

ನಿಷ್ಕಳಂಕ ಹೃದಯವನ್ನು ಹೊಂದಿದ ದೇವ ಭಯವುಳ್ಳವನೊಂದಿಗೆ, ಪುನರಾಗಮನಕ್ಕೆ ಸಂಬಂಧಿಸಿ ಹಝ್ರತ್ ಈಸಾ ನೀಡಿದ ತೀರ್ಪು ಬಗ್ಗೆ ನಾನು ಹೇಳಲು ಬಯಸುತ್ತೇನೆ. ಮಸೀಹರ ಆಗಮನದ ಮೊದಲು ಏಲಿಯಾ ಆಗಮಿಸುವುದು ಆವಶ್ಯಕವಾಗಿದೆ ಎಂದು ಯಹೂದಿಯರು ಹಝ್ರತ್ ಈಸರೊಂದಿಗೆ ಪ್ರಶ್ನಿಸಿದಾಗ ಅವರು ನೀಡಿದ ಉತ್ತರ ಏನಾಗಿತ್ತು? ಅದು ಸರಿಯೋ ಅಲ್ಲವೋ? ಈಸಾ ಮಸೀಹ್ ಹೇಳಿದ್ದರು, ಆಗಮಿಸಲಿದ್ದ ಏಲಿಯಾ ಈ ಯೊಹಾನರೇ ಆಗಿದ್ದಾರೆ. ಇಷ್ಟವಿದ್ದರೆ ಅವರನ್ನು ಅಂಗೀಕರಿಸಿರಿ ಎಂದು. ಒಬ್ಬ ಸತ್ಯವಿಶ್ವಾಸಿಯಾದವನು ಅಲ್ಲಾಹನನ್ನು ನಂಬುವವನಾಗಿರುತ್ತಾನೆ. ಅಲ್ಲಾಹನು ನಿಯೋಜಿಸುವವರು ಹೇಗೆ ಆಗಮಿಸುತ್ತಾರೆ ಎಂದು ಅವನಿಗೆ ತಿಳಿದಿರುತ್ತದೆ. ಈಸಾ ಮಸೀಹ್ ಹೇಳಿದ್ದು ಮತ್ತು ಮಾಡಿದ್ದು ಸತ್ಯವೆಂದು ಅವನು ಅಂಗೀಕರಿಸುವನು. ಈಗ ಸಹ ವಿಷಯ ಇದೇ ರೀತಿ ಅಲ್ಲವೇ? ಅಥವಾ ಬೇರೆಯೇ? ನೀವೇ ಹೇಳಿರಿ. ಹೃದಯದಲ್ಲಿ ದೇವ ಭಯವಿದ್ದರೆ ನನ್ನ ವಾದ ಸುಳ್ಳೆಂದು ಹೇಳಲು ಹೃದಯ ನಡುಗುವುದು. ಖೇದಕರವಾದುದೇನೆಂದರೆ ಈ ಜನರಿಗೆ ಫಿರ್‌ಔನನ ಸಮುದಾಯಕ್ಕೆ ಸೇರಿದ ಒಬ್ಬ ವ್ಯಕ್ತಿಯಲ್ಲಿದ್ದಷ್ಟು ವಿಶ್ವಾಸ ಸಹ ಇಲ್ಲವಾಗಿದೆ. ಫಿರ್‌ಔನನ ಸಮುದಾಯದ ಆ ವ್ಯಕ್ತಿ ಹೇಳಿದ್ದನು: ವಾದಿಸುವವನು ಸುಳ್ಳುವಾದಿಯಾಗಿದ್ದರೆ ಸ್ವತಃ ನಾಶವಾಗುವನು ಎಂದು. ನನಗೆ ಸಂಬಂಧಿಸಿ ಈ ಜನರು ಭಯಭಕ್ತಿಯಿಂದ ವರ್ತಿಸುವವರಾಗಿದ್ದರೆ, ಅವರು ಸಹ ಅದೇರೀತಿ ಹೇಳುತ್ತಿದ್ದರು. ಅಲ್ಲಾಹನು ನನಗೆ ಸಹಾಯ ನೀಡುತ್ತಿರುವನೋ ಅಥವಾ ನನ್ನ ಜಮಾಅತನ್ನು ನಾಶಮಾಡುತ್ತಿರುವನೋ ಎಂದು ಅವರು ನೋಡುತ್ತಿದ್ದರು.

ಅಲ್ಲಾಹನ ಅನುಗ್ರಹದಿಂದ ಒಂದು ಚಿಕ್ಕ ಗ್ರಾಮದಿಂದ ಹೊರಟ ಶಬ್ದವು ಈಗ 210 ದೇಶಗಳಲ್ಲಿ ಹಬ್ಬಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಇದುವೇ ಸಾಕ್ಷ್ಯಾಧಾರವಾಗಿದೆ. ಮೂವತ್ತು ನಲ್ವತ್ತು ವರ್ಷಗಳ ಹಿಂದೆ ಅಹ್ಮದಿಯ್ಯತ್ ತಲಪಬಹುದು ಎಂದು ಕಲ್ಪನೆ ಸಹ ಮಾಡಲಾಗದ ಸ್ಥಳಗಳಿಗೆ ಈಗ ಅಹ್ಮದಿಯ್ಯತ್

ತಲಪಿದೆಯಲ್ಲದೆ ಅಲ್ಲಿ ಎಂತಹ ದೃಢವಿಶ್ವಾಸಿಗಳನ್ನು ಅಲ್ಲಾಹನು ಸೃಷ್ಟಿಸಿದ್ದಾನೆಂದರೆ ಆಶ್ಚರ್ಯ ಪಡುತ್ತೇವೆ. ನಾನು ಒಂದು ಘಟನೆಯನ್ನು ವಿವರಿಸುವೆನು. ಬೆನಿನ್ ದೇಶದಲ್ಲಿ 2012ರಲ್ಲಿ ಒಂದು ಜಮಾಅತ್ ಸ್ಥಾಪಿತವಾಯಿತು. ಅಲ್ಲಿ ಇಬ್ರಾಹೀಮ್ ಸಾಹಿಬ್ ಎಂಬವರು ಅಹ್ಮದಿಯರಾದರು. ಅವರು ಅಹ್ಮದಿಯರಾದ ನಂತರ ವಿಶ್ವಾಸ ಮತ್ತು ನಿಷ್ಠೆಯಲ್ಲಿ ಬಹಳ ವರ್ಧನೆ ಹೊಂದಿದರು. ಅವರು ತನ್ನ ಸಂಬಂಧಿಕರಿಗೆ ತಬ್ಲೀಗ್ ಮಾಡಲು ಪ್ರಾರಂಭಿಸಿದರು. ಅವರ ಸಹೋದರ ಅವರ ಬಗ್ಗೆ ಅತೃಪ್ತನಾಗಿ ಅವರೊಂದಿಗೆ ಜಗಳ ಶುರುಮಾಡಿದರು. ಆದರೆ ಅವರು ತಬ್ಲೀಗ್ ಮುಂದುವರಿಸಿದರು. ಅವರ ಪ್ರಯತ್ನದಿಂದ ಸುತ್ತುಮುತ್ತಲಿನ ಮೂರು ಗ್ರಾಮಗಳ ಜನರು ಅಹ್ಮದಿಯಾದರು. ಆಗ ಅವರ ಸಹೋದರ ತನ್ನ ಒಬ್ಬ ಸ್ನೇಹಿತನೊಂದಿಗೆ ಸೇರಿಕೊಂಡು ಅವರನ್ನು ಕೊಲ್ಲುವ ಯೋಜನೆ ರೂಪಿಸಿದನು. ಇಬ್ರಾಹೀಮ್ ಸಾಹಿಬ್ ಹೇಳುತ್ತಾರೆ: ನಾನು ಸ್ವಪ್ನದಲ್ಲಿ ಕಂಡೆನು, ತನ್ನ ಸಹೋದರ ಮತ್ತು ಅವನ ಸ್ನೇಹಿತ ಒಂದು ಹೊಂಡ ತೋಡಿ ಅದರಲ್ಲಿ ಏನೋ ಹಾಕುತ್ತಿದ್ದಾರೆ. ಮೂರು ದಿನಗಳ ನಂತರ ಇಬ್ರಾಹೀಮ್ ಸಾಹಿಬರ ಸಹೋದರನ ಸ್ನೇಹಿತ ಅಚಾನಕವಾಗಿ ರೋಗಬಾಧಿತನಾಗಿ ಮೃತಪಟ್ಟನು. ಆಗ ಇಬ್ರಾಹೀಮ್ ಸಾಹಿಬರ ಅಣ್ಣ ಹೇಳಿದರು: ಇಬ್ರಾಹೀಮ್ ಏನೋ ಜಾದು ಮಾಡಿ ನನ್ನ ಸ್ನೇಹಿತನನ್ನು ಕೊಂದಿದ್ದಾನೆ ಎಂದು. ಇಬ್ರಾಹೀಮ್ ಸಾಹಿಬ್ ಹೇಳುತ್ತಾರೆ: ಸ್ವಲ್ಪ ದಿನಗಳ ನಂತರ ನಾನು ಇನ್ನೊಂದು ಸ್ವಪ್ನ ಕಂಡೆನು. ತನ್ನ ಅಣ್ಣ ಒಂದು ಮರದ ಬಳಿ ನಿಂತು ತನ್ನ ಎತ್ತರವನ್ನು ಅಳೆಯುತ್ತಿದ್ದಾರೆ. ಆ ಪ್ರದೇಶದಲ್ಲಿರುವ ಒಂದು ವಾಡಿಕೆ ಏನೆಂದರೆ ಒಬ್ಬನು ಮೃತನಾದರೆ ಅವನ ಶವದ ಉದ್ದವನ್ನು ಒಂದು ಮರದ ತುಂಡಿನ ಮೂಲಕ ಅಳೆಯಲಾಗುತ್ತಿತ್ತು. ಮತ್ತು ಆ ಅಳತೆ ಪ್ರಕಾರ ಗೋರಿ ತೋಡಲಾಗುತ್ತಿತ್ತು. ಇಬ್ರಾಹೀಮ್ ಸಾಹಿಬ್ ಹೇಳುತ್ತಾರೆ: ಕೆಲವು ದಿನಗಳ ನಂತರ ನನ್ನ ಅಣ್ಣನ ಗರ್ಭಿಣಿ ಪತ್ನಿ ರೋಗಿಯಾಗಿ ಎರಡು ದಿನಗಳಲ್ಲಿ ಮೃತಳಾದಳು. ಆಗ ಇಬ್ರಾಹೀಮರ ಸಹೋದರ ಪ್ರಚಾರ ಮಾಡಲು ತೊಡಗಿದನು, ಇಬ್ರಾಹೀಮ್ ಮಾಂತ್ರಿಕನೆಂದು. ಅಲ್ಲಿನ ಚೀಫ್‌ಗೆ ದೂರು ನೀಡಿದರು. ಚೀಫ್ ಹೇಳಿದನು: ಇಂತಿಷ್ಟು ಹಣ ತಂದು ಕೊಡು ನಾನು ಈ ಪ್ರಶ್ನೆ ಪರಿಹರಿಸುವೆನು ಎಂದು. ಚೀಫ್‌ನಿಗೆ ಹಣ ನೀಡಲಾಯಿತು. ಚೀಫ್ ಇಬ್ರಾಹೀಮ್ ಸಾಹಿಬರನ್ನು ಕರೆದು ಕೇಳಿದನು: ನೀನು ಇದೇನು ಮಾಡಿರುವೆ. ನೀನು ಹೊಸ ಧರ್ಮಕ್ಕೆ ಸೇರಿರುವೆ. ನೀನು ಅದನ್ನು ತ್ಯಜಿಸದಿದ್ದರೆ ನಾಳೆಯ ಸುರ್ಯೋದಯ ಕಾಣಲಾರೆ. ಇಬ್ರಾಹೀಮ್ ಹೇಳಿದರು: ನಾನು ಧರ್ಮವನ್ನು ಸತ್ಯ ಎಂದು ನಂಬಿ ಸ್ವೀಕರಿಸಿದ್ದೇನೆ. ನಾನು ಅದನ್ನು ತ್ಯಜಿಸಲಾರೆ. ಸಾಯುವ ವಿಷಯದ ಬಗ್ಗೆ ಹೇಳುವುದಾದರೆ ಸಾಯುವುದು ಬದುಕುವುದು ಅಲ್ಲಾಹನ ಕೈಯಲ್ಲಿದೆ. ಆಗ ಚೀಫ್ ಹೇಳಿದನು: ಈ ಪ್ರದೇಶದ ದೇವ ನಾನೇ ಆಗಿದ್ದೇನೆ. ನಾನು ಇಚ್ಛಿಸುವುದನ್ನು ಮಾಡುತ್ತೇನೆ. ನಿಮಗೆಲ್ಲಾ ಚೆನ್ನಾಗಿ ತಿಳಿದಿದೆ ನಾನು ಏನು ತೀರ್ಪು ನೀಡುವೆನೋ ಅದು ಹಾಗೆಯೇ ಸಂಭವಿಸುತ್ತದೆ ಎಂದು. ನಾಳೆಯೊಳಗೆ ಒಬ್ಬನು ಸಾಯುವನು ಎಂದು ನಾನು ತೀರ್ಮಾನಿಸಿದರೆ ಅವನು ಖಂಡಿತವಾಗಿ ಸಾಯುವನು. ಇಬ್ರಾಹೀಮ್ ಸಾಹಿಬ್ ಹೇಳಿದರು: ಸರಿ, ನಿಮ್ಮ ಸಂಪ್ರದಾಯದ ಜನರಿಗೆ ನೀವು ಹೇಳುವುದು ಸರಿಯಾಗಬಹುದು. ನಾನು ಅದರ ಬಗ್ಗೆ ಏನೂ ಹೇಳಲಾರೆ. ಆದರೆ ನಾನು ಧರ್ಮತ್ಯಾಗ ಮಾಡಲಾರೆ. ಏಕೆಂದರೆ ಸತ್ಯವಾದ ಇಸ್ಲಾಮ್ ಇದೇ ಆಗಿದೆ. ಆಗ ಚೀಫ್ ಇನ್ನಷ್ಟು ಸಿಟ್ಟುಗೊಂಡನು. ಅವನು ಇಬ್ರಾಹೀಮ್ ಸಾಹಿಬರನ್ನು ಬಂಧಿಸಲು ಹೇಳಿದನು. ಅವರನ್ನು ಬಂಧನದಲ್ಲಿ ಇರಿಸಿದವರು ಲಾಲಸೆ ಹೊಂದಿದವರಾಗಿದ್ದರು. ಅವರಿಗೆ ಸ್ವಲ್ಪ ಹಣ ಕೊಟ್ಟಾಗ ಅವರು ಇಬ್ರಾಹೀಮರನ್ನು ಬಿಡುಗಡೆ ಮಾಡಿದರು. ಮರುದಿನ ಸಮಾಚಾರ ಲಭಿಸಿತು. ಆ ಚೀಫ್‌ನಿಗೆ ಪಕ್ಷಪಾತ ರೋಗ ಬಾಧಿಸಿ ಅವನಿಗೆ ಚಲಿಸಲಾಗುತ್ತಿಲ್ಲ ಎಂದು. ಅವನು ಎರಡು ದಿನದ ನಂತರ ಮೃತನಾದನು. ಇದನ್ನು ನೋಡಿ ಇಬ್ರಾಹೀಮರ ಅಣ್ಣ ಕುಟುಂಬದವರೊಂದಿಗೆ ತನ್ನನ್ನು ಇಬ್ರಾಹೀಮರೊಂದಿಗೆ ರಾಜಿ ಮಾಡಿಸಲು ಹೇಳಿದನು. ಇಬ್ರಾಹೀಮ್ ಹೇಳಿದರು: ನನಗೆ ಯಾರೊಂದಿಗೂ ಜಗಳವಿಲ್ಲ. ನಾವು ಶಾಂತಿಪ್ರಿಯರಾಗಿದ್ದೇವೆ. ಇಸ್ಲಾಮಿನ ಸಂದೇಶ ಇದೇ ಆಗಿದೆ. ಆ ಪ್ರದೇಶದಲ್ಲಿ ಈ ದೃಷ್ಟಾಂತದ ಪ್ರಭಾವ ಬಹಳವಾಗಿತ್ತು. ಅದರ ಬಗ್ಗೆ ಚರ್ಚೆ ನಡೆಯಿತು. ಅಹ್ಮದಿಯ್ಯತ್‌ನ ಸತ್ಯತೆ ಪ್ರಕಟವಾಯಿತು. ಇಂದಿನ ಕಾಲದಲ್ಲಿ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯನ್ನು ಅಲ್ಲಾಹನು ಬೆಂಬಲಿಸುವ ಘಟನೆಗಳು ನಡೆಯುತ್ತಾ ಇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಅಲ್ಲಾಹನ ಮೇಲೆ ಆಣೆ ಹಾಕಿ ಹೇಳುತ್ತೇನೆ ಸಾವಿರಾರು ದೃಷ್ಟಾಂತಗಳು ನನ್ನ ಸತ್ಯತೆಗೆ ಸಾಕ್ಷ್ಯವಾಗಿ ಪ್ರಕಟವಾಗಿವೆ. ಈಗಲೂ ಪ್ರಕಟವಾಗುತ್ತಿವೆ. ಮುಂದೆ ಸಹ ಪ್ರಕಟವಾಗುವುವು. ಅವು ಎಂದೂ ಕೊನೆಗೊಳ್ಳಲಾರವು.

ಮುಂದೆ ಸಹ ದೃಷ್ಟಾಂತಗಳು ಪ್ರಕಟವಾಗುವುವು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ. ಇದು ಮಾನವ ನಿರ್ಮಿತ ಯೋಜನೆಯಾಗಿದ್ದರೆ ಅಲ್ಲಾಹನಿಂದ ಇಷ್ಟು ಸಹಾಯ ಲಭಿಸುತ್ತಿರಲಿಲ್ಲ. ಇದು ಅಲ್ಲಾಹನ ಯೋಜನೆಯೇ ಆಗಿದೆ. ಆ ಕಾರಣದಿಂದ ಅಲ್ಲಾಹನ ನೆರವು ಲಭಿಸುತ್ತಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕೆಲವು ಜನರ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ನೀಡಿದ್ದಾರೆ: ಜನರು ಹೇಳುತ್ತಾರೆ ನಾವು ಇಸ್ಲಾಮಿನ ಉಪದೇಶಗಳನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ. ಇಸ್ಲಾಮಿನಲ್ಲಿ ಎಷ್ಟೆಷ್ಟು ಪಂಗಡಗಳು ಮೊದಲೇ ಇರುವಾಗ ಒಂದು ಹೊಸ ಪಂಗಡದ ಆವಶ್ಯಕತೆ ಏನಿದೆ? ನಿಮ್ಮ ಜಮಾಅತನ್ನು ಏಕೆ ಸೇರಬೇಕು?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ ಹೇಳುತ್ತಾರೆ: ಈ ಜನರು ಈ ರೀತಿ ಮೋಸಗೊಳಿಸುತ್ತಾರೆ. ಕೆಲವರು ತಮ್ಮ ಅಜ್ಞತೆ ಕಾರಣದಿಂದ ಅವರ ಮಾತುಗಳಿಂದ ತಪ್ಪು ಗ್ರಹಿಕೆ ಹೊಂದುತ್ತಾರೆ. ಇಂತಹ ಮಾತುಗಳು ಅಜ್ಞಾನದ ಕಾರಣದಿಂದಾಗಿವೆ. ಇದು ನನ್ನ ಸ್ವಂತ ಕೆಲಸವಲ್ಲ. ನಾನು ಈ ಜಮಾಅತನ್ನು ಸ್ಥಾಪಿಸಲಿಲ್ಲ. ಇದು ಅಲ್ಲಾಹನು ಸ್ಥಾಪಿಸಿದ ಜಮಾಅತಾಗಿದೆ. ಏಕೆಂದರೆ ವಿಶ್ವಾಸದ ಸ್ಥಿತಿ ಬಲಹೀನವಾಗುತ್ತಾ ಬಂದು ಅದರ ಶಕ್ತಿ ಸಂಪೂರ್ಣ

ಇಲ್ಲವಾಯಿತು. ಆದುದರಿಂದ ವಾಸ್ತವಿಕ ವಿಶ್ವಾಸದ ಆತ್ಮವನ್ನು ಊದಲು ಅಲ್ಲಾಹನು ಇಚ್ಚಿಸಿದ್ದಾನೆ. ಅವನು ಈ ಕೆಲಸವನ್ನು ಈ ಜಮಾಅತ್ ಮೂಲಕ ಮಾಡಲು ಇಚ್ಛಿಸಿದ್ದಾನೆ. ಆದುದರಿಂದ ಜನರ ಈ ಆಕ್ಷೇಪ ನಿರರ್ಥಕವಾಗಿದೆ. ನಿಸ್ಸಂಶಯವಾಗಿ ಮುಸ್ಲಿಮರು ಬಾಹ್ಯಾಚಾರಣೆಗಳನ್ನು ಮಾಡುತ್ತಿದ್ದಾರೆ. ಆದರೆ ಆತ್ಮ ಅವುಗಳಲಿಲ್ಲ. ಎಂದರೆ ತಖ್ವ ಇಲ್ಲವಾಗಿದೆ. ಮುಸ್ಲಿಮರೆಂದು ಹೇಳಿಕೊಳ್ಳುವವರ ಕರ್ಮಗಳು ಸತ್ಕರ್ಮಗಳಾಗಿದ್ದರೆ ಅವುಗಳಿಂದ ಪರಿಶುದ್ಧ ಪರಿಣಾಮಗಳು ಏಕೆ ಹುಟ್ಟುವುದಿಲ್ಲ? ಮಸೀಹ್ ಮೌಊದರ ಆಗಮನದ ಉದ್ದೇಶ ಇಸ್ಲಾಮನ್ನು ಆಂತರಿಕ ಮತ್ತು ಬಾಹ್ಯ ಪಿತೂರಿಗಳಿಂದ ರಕ್ಷಿಸುವುದು ಮತ್ತು ಆಕ್ರಮಣಗಳಿಂದ ರಕ್ಷಿಸುವುದಾಗಿದೆ. ಇದನ್ನೇ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿಶದೀಕರಿಸಿರುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಲೋಕದ ಅಂತಿಮ ಕಾಲಘಟ್ಟದ ಬಗ್ಗೆ ಹೇಳಿದ್ದಾರೆ: ಆ ಕಾಲದಲ್ಲಿ ಎರಡು ಬಗೆಯ ಪಿತೂರಿಗಳಿರುವುವು. ಒಂದು ಆಂತರಿಕ ಇನ್ನೊಂದು ಬಾಹ್ಯ. ಆಂತರಿಕ ಪಿತೂರಿ ಏನೆಂದರೆ ಮುಸ್ಲಿಮನು ಸತ್ಯವಾದ ಮಾರ್ಗದರ್ಶನದಲ್ಲಿ ನೆಲೆ ನಿಲ್ಲಲಾರರು. ಅವರು ಶೈತಾನನ ಕೃತ್ಯ ಮತ್ತು ಹಸ್ತಕ್ಷೇಪಗಳಿಗೆ ಅಧೀನರಾಗಿರುವರು. ಬಾಹ್ಯ ಪಿತೂರಿ ಏನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವ್ಯಕ್ತಿತ್ವದ ಬಗ್ಗೆ ಸುಳ್ಳು ಸೃಷ್ಟಿಸಲಾಗುವುದು. ಇದು ಸಹ ಈಗ ಬಹಳ ವರ್ಧಿಸಿದೆ. ಹೃದಯಕ್ಕೆ ನೋವುಂಟುಮಾಡುವ ಆಕ್ರಮಣಗಳಿಂದ ಎಲ್ಲಾ ವಿಧಗಳಲ್ಲಿ ಇಸ್ಲಾಮನ್ನು ಅಪಕೀರ್ತಿಗೊಳಿಸಲು ಪ್ರಯತ್ನ ಮಾಡಲಾಗುತ್ತಿದೆ. ಈಸಾ ಮಸೀಹರ ದೇವತ್ವವನ್ನು ಮತ್ತು ಶಿಲುಬೆಯ ಶಾಪದ ಬಗ್ಗೆ ವಿಶ್ವಾಸ ಹೊಂದಲು ಎಲ್ಲಾ ವಿಧಗಳ ಉಪಾಯಗಳನ್ನು ಮಾಡಲಾಗುತ್ತಿದೆ.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ್ದೇವೆ. ಆದುದರಿಂದ ನಮ್ಮ ದೇವ ಸಾಮೀಪ್ಯ ಮತ್ತು ತಖ್ವದ ಮಟ್ಟ ಅನ್ಯರಿಗಿಂತ ಉನ್ನತವಾಗಿರಬೇಕು. ನಮ್ಮ ಕರ್ಮಗಳು ಅನ್ಯರಿಗಿಂತ ಉತ್ತಮವಾಗಬೇಕು. ನಮ್ಮ ಕರ್ಮಗಳು ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿ ಸಾತ್ವಿಕವಾಗಿ ಯಾವಾಗಲೂ ಇರಬೇಕು. ಸತ್ಕರ್ಮ ಎಂದರೇನು. ಪವಿತ್ರ ಖುರ್‌ಆನ್‌ನಲ್ಲಿ ಈಮಾನ್‌ನೊಂದಿಗೆ ಸತ್ಕರ್ಮವನ್ನು ಸಹ ತೋರಿಸಲಾಗಿದೆ. ಸತ್ಕರ್ಮ (ಅಮಲೇ ಸಾಲಿಹ್) ಎಂದರೆ ಅವರಲ್ಲಿ ಒಂದಿಷ್ಟು ಕೆಡುಕು ಸಹ ಇರಬಾರದು. ನೆನಪಿಡಿರಿ, ಮನುಷ್ಯನ ಕರ್ಮಗಳಿಗೆ ಚೋರರು ಇರುತ್ತಾರೆ. ಅವುಗಳು ಯಾವುವು. ಅವು ತೋರಿಕೆಯ ಕರ್ಮಗಳು, ಆತ್ಮ ಪ್ರಶಂಸೆ ಮಾಡುವ ಎಲ್ಲಾ ಕೆಟ್ಟ ಕೆಲಸಗಳಿಂದ ಮತ್ತು ಪಾಪಗಳಿಂದ ಸತ್ಕರ್ಮಗಳು ನಿಷ್ಫಲವಾಗುತ್ತವೆ. ಸತ್ಕರ್ಮದಲ್ಲಿ ದೌರ್ಜನ್ಯ, ಆತ್ಮ ಪ್ರಶಂಸೆ, ಅಹಂಭಾವ ಅನ್ಯರ ಹಕ್ಕುಗಳ ಅಪಹಾರ ಮಾಡುವ ಯೋಚನೆ ಸಹ ಇರಬಾರದು. ಸತ್ಕರ್ಮದಿಂದ ಪರಲೋಕದಲ್ಲಿ ರಕ್ಷಿಸಲ್ಪಡುವ ಹಾಗೆ ಇಹಲೋಕದಲ್ಲಿಯೂ ರಕ್ಷಣೆಯನ್ನು ಮನುಷ್ಯನು ಪಡೆಯುತ್ತಾನೆ. ಉತ್ತಮ ಸತ್ಕರ್ಮಗಳನ್ನು ಮಾಡಿದರೆ ಅಲ್ಲಾಹನು ಸಂಪ್ರೀತನಾಗುತ್ತಾನೆ. ಪಾರಿತೋಷಕ ನೀಡುತ್ತಾನೆ. ಅದೇ ರೀತಿ ಸತ್ಕರ್ಮ ನಿರತನಾದವನು ಇಹಲೋಕದಲ್ಲಿಯೂ ಲೌಕಿಕ ಸಂಕಷ್ಟಗಳಿಂದ ರಕ್ಷಿಸಲ್ಪಡುತ್ತಾನೆ. ಮನೆಯಲ್ಲಿ ಒಬ್ಬನಾದರೂ ಸತ್ಕರ್ಮಿ ಇದ್ದರೆ ಮನೆಯಲ್ಲಿರುವ ಎಲ್ಲರೂ ರಕ್ಷಿಸಲ್ಪಡುತ್ತಾರೆ.

ಈಗ ನೀವು ತೌಬ ಮಾಡಿದ್ದೀರಿ. ಮುಂದೆ ನೀವು ನಿಮ್ಮನ್ನು ಹೇಗೆ ಪರಿಶುದ್ಧವಾಗಿರಿಸುವಿರಿ ಎಂದು ಅಲ್ಲಾಹನು ನೋಡುವನು. ಯಾವಾಗಲೂ ಇಸ್ತಿಗ್‌ಫಾರ್ ದುಆ ಮಾಡುತ್ತಾ ಇರಬೇಕು. ನೀವು ಪ್ರತಿಯೊಂದು ಪಾಪದಿಂದ ರಕ್ಷಿಸಲ್ಪಡುವಿರಿ. ಅದು ಬಾಹ್ಯವಾಗಿರಲಿ, ಆಂತರಿಕವಾಗಿರಲಿ, ತಿಳಿದಿರಲಿ, ತಿಳಿಯದಿರಲಿ, ಕೈ, ಕಾಲು, ನಾಲಗೆ, ಮೂಗು, ಕಿವಿ, ಕಣ್ಣು ಮೊದಲಾದವುಗಳು ಪ್ರತಿಯೊಂದು ವಿಧದ ಪಾಪದಿಂದ ಇಸ್ತಿಗ್‌ಫಾರ್ ಮೂಲಕ ರಕ್ಷಣೆ ಪಡೆಯಬಹುದು. ಆದುದರಿಂದ ಸದಾ ಇಸ್ತಿಗ್‌ಫಾರ್ ಮಾಡುತ್ತಾ ಇರಿ. ಹಾಗೆ ಶರೀರದ ಪ್ರತಿಯೊಂದು ಅಂಗ ಪಾಪದಿಂದ ಸುರಕ್ಷಿತವಾಗಿರಲಿ.

ಇಂದಿನ ಕಾಲದಲ್ಲಿ ಆದಮ್ ಅಲೈಹಿಸ್ಸಲಾಮರ ಪ್ರಾರ್ಥನೆ ಮಾಡಬೇಕು. ಅದು ಹೀಗಿದೆ: **ರಬ್ಬನಾ ಝುಲಮ್‌ನಾ ಅನ್‌ಫುಸನಾ ವಇನ್‌ಲಮ್ ತಗ್‌ಫಿರ್‌ಲನಾ ವತರ್‌ಹಮ್‌ನಾ ಲನಕೂನನ್ನ ಮಿನಲ್ ಖಾಸಿರೀನ್.** ಈ ಪ್ರಾರ್ಥನೆ ಅಲ್ಲಾಹನು ಅಂಗೀಕರಿಸಿದುದಾಗಿದೆ. ನಿರ್ಲಕ್ಷ್ಯತೆಯಿಂದ ಜೀವಿಸಬೇಡಿರಿ. ನಿರ್ಲಕ್ಷ್ಯತೆಯಿಲ್ಲದ ಜೀವನ ನಡೆಸುವವನು ಯಾವುದೇ ಶಕ್ತಿಮೀರಿದ ವಿಪತ್ತಿಗೆ ಗುರಿಯಾಗುವನೆಂದು ಖಂಡಿತವಾಗಿ ಪ್ರತೀಕ್ಷೆ ಮಾಡಲಾಗದು. ನನಗೆ ಹೀಗೆ ಒಂದು ದುಆ ಇಲ್‌ಹಾಮ್ ಮೂಲಕ ಅವತೀರ್ಣವಾಗಿದೆ: **ರಬ್ಬಿ ಕುಲ್ಲಿ ಶೈಯಿನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ.** ಓ ನನ್ನ ಪ್ರಭು ಪ್ರತಿಯೊಂದು ವಸ್ತು ನಿನ್ನ ಸೇವಕನಾಗಿದೆ. ಓ ನನ್ನ ಪ್ರಭು, ನನ್ನನ್ನು ರಕ್ಷಿಸು, ನನಗೆ ಸಹಾಯ ಮಾಡು, ನನ್ನ ಮೇಲೆ ದಯೆದೋರು.

ನಮ್ಮ ವಿಶ್ವಾಸವೇನೆಂದರೆ ಎಲ್ಲವೂ ಅಲ್ಲಾಹನ ಕೈಗಳಲ್ಲಿವೆ. ಅಲ್ಲಾಹನು ಮಾಧ್ಯಮಗಳ ಮೂಲಕ ಮಾಡುತ್ತಾನೆ ಅಥವಾ ಮಾಧ್ಯಮವಿಲ್ಲದೆ ಮಾಡುತ್ತಾನೆ. ಅಲ್ಲಾಹನು ಯಾವುದಾದರೂ ಮಾರ್ಗ ತೆರೆಯುತ್ತಾನೆ. ಅಥವಾ ತೆರೆಯದೆ ಇರುತ್ತಾನೆ. ಎಲ್ಲವೂ ಅಲ್ಲಾಹನ ಕೈಗಳಲ್ಲಿವೆ. ಆದುದರಿಂದ ಈ ಪ್ರಾರ್ಥನೆ ಮಾಡಿರಿ. ಈ ಎರಡು ಪ್ರಾರ್ಥನೆಗಳ ಬಗ್ಗೆ ಲಕ್ಷ್ಯ ನೀಡಿರಿ. ಮತ್ತು ಮನವರಿಕೆ ಮಾಡಿರಿ.

ಆದುದರಿಂದ ಪ್ರತಿಯೊಬ್ಬ ಅಹ್ಮದಿ ತನ್ನನ್ನು ಪರಿಶೋಧಿಸಬೇಕು. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ನಮ್ಮ ಹೊಣೆಗಾರಿಕೆಗಳನ್ನು ನಿಭಾಯಿಸುತ್ತೇವೆಯೋ ಎಂದು. ನನಗೆ ಪರಿಶೋಧನೆಯಿಂದ ತಿಳಿದು ಬಂದುದೇನೆಂದರೆ ಹಲವರು ನಮಾಝ್ ಬಗ್ಗೆ ಸಹ ಪೂರ್ಣ ಲಕ್ಷ್ಯ ನೀಡುವುದಿಲ್ಲ ಎಂದು. ಕೆಲವರು ಇಸ್ತಿಗ್‌ಫಾರ್ ಬಗ್ಗೆ ತೀರಾ ಲಕ್ಷಿಸುವುದಿಲ್ಲ. ಒಬ್ಬರಿನ್ನೊಬ್ಬರ ಹಕ್ಕುಗಳನ್ನು ನೀಡುವ ಬಗ್ಗೆ ಗಮನ ಹರಿಸುವುದಿಲ್ಲ. ನಮ್ಮ ಸ್ಥಿತಿ ಹೀಗೆ ಆಗಿದ್ದರೆ ನಾವು ಸತ್ಕರ್ಮ ಮಾಡುವವರು ಎಂದು ಹೇಳಲು ಹೇಗೆ ತಾನೆ ಸಾಧ್ಯ? ನಾವು

ಬೈಅತ್ ಹೊಣೆಗಾರಿಕೆಗಳನ್ನು ನಿಭಾಯಿಸುವವರೆಂದು ಹೇಳಲು ಹೇಗೆ ತಾನೆ ಸಾಧ್ಯ?. ಅನ್ಯರು ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬದ ಕಾರಣ ಪಾಪಿಗಳಾಗುತ್ತಿದ್ದಾರೆ. ಆದರೆ ನಾವು ನಂಬಿದ ನಂತರ ನಮ್ಮಲ್ಲಿ ಉತ್ತಮ ಪರಿವರ್ತನೆ ಮಾಡದೆ, ಪ್ರತಿಜ್ಞೆ ಮಾಡಿ ಅದನ್ನು ಈಡೇರಿಸದೆ ಪಾಪಿಗಳಾಗುತ್ತಿದ್ದೇವೆ. ಆದುದರಿಂದ ಪ್ರತಿಯೊಬ್ಬನು ತನ್ನನ್ನು ಬಹಳ ಚಿಂತೆಯಿಂದ ಪರಿಶೋಧಿಸಬೇಕು. ನಾವು ಕೇವಲ ಆಚಾರ ರೂಪದಲ್ಲಿ ಯೌಮೇ ಮಸೀಹ್ ಮೌಊದ್ ದಿನಾಚರಣೆ ಮಾಡುವವರಾಗದಿರೋಣ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವವರನ್ನಾಗಿ ಅಲ್ಲಾಹನು ಮಾಡಲಿ. ನಾವು ಆಂತರಿಕ ಮತ್ತು ಬಾಹ್ಯ ಪಿತೂರಿಗಳಿಂದ ರಕ್ಷಿಸಲ್ಪಡುವವರಾಗಲಿ. ಅಲ್ಲಾಹನು ನಮ್ಮನ್ನು ಯಾವಾಗಲೂ ತನ್ನ ಆಶ್ರಯದಲ್ಲಿರಿಸಲಿ. ಪ್ರತಿಯೊಂದು ಕಷ್ಟ ಮತ್ತು ವಿಪತ್ತಿನಿಂದ ನಮ್ಮನ್ನು ರಕ್ಷಿಸಲಿ – ಆಮೀನ್.

ಇಂದು ಒಂದು ಶುಭ ಸಮಾಚಾರವಿದೆ. ಖಾದಿಯಾನ್‌ನಿಂದ ಪ್ರಕಟವಾಗುತ್ತಿದ್ದ ಅಲ್‌ಹಕಮ್ ಪತ್ರಿಕೆ ಇಂದಿನಿಂದ ಇಂಗ್ಲಿಷ್‌ನಲ್ಲಿ ಅದು ಇಲ್ಲಿಂದ ಪ್ರಕಟಿಸಲಾಗುತ್ತಿದೆ. ಮುದ್ರಿತ ಪ್ರತಿಗಳು ಬಹಳ ಕಡಿಮೆ ಸಂಖ್ಯೆಯಲ್ಲಿ ಪ್ರಕಟಿಸಲಾಗುವುದು. ಆದರೆ ಇಂಟರ್‌ನೆಟ್‌ನಲ್ಲಿ ಸಿಗುವುದು. ಖುತ್‌ಬದ ನಂತರ ತಕ್ಷಣ www.alhakam.org ವೆಬ್‌ಸೈಟ್‌ನಲ್ಲಿ ಸಿಗುವುದು. ಅದೇ ರೀತಿ ಮೊಬೈಲ್‌ಗಳಲ್ಲೂ ಟ್ಯಾಬ್‌ಲೆಟ್‌ಗಳಲ್ಲೂ Al-Hakam ಎಂಬ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಬಹುದು. ಈ ಸಲ ಯೌಮೆ ಮಸೀಹ್ ಮೌಊದ್ ವಿಶೇಷಾಂಕವಾಗಿದೆ. ಪ್ರತಿ ಶುಕ್ರವಾರ ಖುತುಬದ ನಂತರ ಅಪ್‌ಲೋಡ್ ಮಾಡಲಾಗುವುದು. ಇದು ಯಾವಾಗಲೂ ಪ್ರಕಟವಾಗುತ್ತಿರಲಿ. ಇಂಗ್ಲಿಷ್‌ನಲ್ಲಿರುವ ಕಾರಣ ಇಂಗ್ಲಿಷ್ ತಿಳಿದವರಿಗೆ ಇದು ಬಹಳ ಉಪಕಾರವಾಗುವುದು. ಇದು ನಿರಂತರ ಜಾರಿಯಲ್ಲಿರುವಂತೆ ಅಲ್ಲಾಹನು ಅನುಗ್ರಹಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 23-03-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon